ಮೂಲ ದಾವಾ ನಂ. 87/2019

ಡಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 13-12-2022 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಜಿ. ವಿ. ಬಿ. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಅಫಿಡೆವಿಟ್ ಮುಖಾಂತರ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ವಿಚಾರ ನನ್ನ ತಿಳುವಳಿಕೆ ಮತ್ತು ನಂಬಿಕೆಯ ಮಟ್ಟಕ್ಕೆ ಸರಿ ಇದೆ.

ಶ್ರೀಮತಿ ತಾರಾಬಾಯಿ ಹನುಮಂತ ನಾಯ್ಕರವರು ಮಾಡಿದಂತಹ ವಿಲ್‌ನಾಮೆ ಮತ್ತು ಅವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ವಿಲ್‌ನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಎಂದು, ಅದರಲ್ಲಿನ ತನ್ನ ಸಹಿಯನ್ನು ನಿಡಿ 1 ಎ ಎಂದು ಗುರುತಿಸಲಾಯಿತು. ಸಾಕ್ಷಿ ಸದ್ರಿ ದಾಖಲೆಯಲ್ಲಿರುವ ಶ್ರೀಮತಿ ತಾರಾಬಾಯಿ ಹನುಮಂತ ನಾಯ್ಕರವರ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 1 ಬಿ ದಿಂದ ನಿಡಿ 1 ಎಫ್ ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗೆ ಶ್ರೀಮತಿ ತಾರಾಬಾಯಿ ಹನುಮಂತ ನಾಯ್ಕ ರವರು ಸಹಿ ಮಾಡಿದ ಮೇಲೆ ಅದಕ್ಕೆ ಸಾಕ್ಷಿದಾರರಾಗಿ ಆರ್ ಎನ್ ನಾಯ್ಕ ರವರು ಸಹಿ ಮಾಡಿರುತ್ತಾರೆ. ಸಾಕ್ಷಿ ಸದ್ರಿಯವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಜಿ ಎಂದು ಗುರುತಿಸಲಾಯಿತು. ಆರ್ ಎನ್ ನಾಯ್ಕ ರವರು ಉಪನೊಂದಣಾಧಿಕಾರಿಯಾಗಿ ಕುಮಟಾದಲ್ಲಿ ಕೆಲಸ ಮಾಡಿದ್ದು ಹೊನ್ನಾವರದಲ್ಲಿ ಅವರು ಜಾಗ ಖರೀದಿ ಮಾಡಿ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ದಾಖಲೆಗೆ ಮಾಜಿ ವಿಧಾನಸಭಾ ಸದಸ್ಯರಾದ ಎಸ್ ವಿ ನಾಯಕ ರವರು ಸಹಿ ಮಾಡಿದ್ದು ಸಾಕ್ಷಿ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಎಚ್ ಎಂದು ಗುರುತಿಸಲಾಯಿತು. ಎಸ್ ವಿ ನಾಯಕ ರವರ ಸಹಿ ಆದ ಮೇಲೆ ಸದ್ರಿ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಶ್ರೀಮತಿ ತಾರಾಬಾಯಿ ಹನುಮಂತ ನಾಯ್ಕ, ಆರ್ ಎನ್ ನಾಯಕ , ಎಸ್ ವಿ ನಾಯಕ ಮತ್ತು ನಾನು ಸಹಿ ಮಾಡುತ್ತಿದ್ದುದನ್ನು ಪ್ರತಿಯೊಬ್ಬರು ನೋಡಿಕೊಂಡು ಸಹಿ ಮಾಡಿದ್ದರು. ಸದರಿ ದಾಖಲೆಗೆ ಎಲ್ಲರ ನಂತರ ಪತ್ರ ತಯಾರಕರಾದ ಎಮ್ ಎಸ್ ನಾಯ್ಕರವರು ಸಹಿ ಮಾಡಿ ರಬ್ಬರ್ ಸ್ಟಾಂಪ ಹಾಕಿರುತ್ತಾರೆ. ಸಾಕ್ಷಿ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಐ ಎಂದು ಗುರುತಿಸಲಾಯಿತು.

ಸದ್ರಿ ವಿಲ್ ನಾಮೆ ಮಾಡುವ ಸಮಯದಲ್ಲಿ ಶ್ರೀಮತಿ ತಾರಾಬಾಯಿ ಹನುಮಂತ ನಾಯ್ಕರವರು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿದ್ದರು.

(ಈ ಹಂತದಲ್ಲಿ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.